ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೮ನೇ ಜೂನ್ ೧೯೯೦, ಆಷಾಢ ೭, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧.೦೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಆಹಾರ ದಳದವರಿಂದ ನಡೆಸಲಾದ ದಾಳಿಗಳು

೯೧೬. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

(ಅ) ಆಹಾರ ಇಲಾಖೆಯು ನಿಯಂತ್ರಣದಲ್ಲಿ ಯಾವುದಾದರು ಆಹಾರ ಕೋಶ ಇರುವುದೆ ?

(ಆ) ಹಾಗಿದ್ದಲ್ಲಿ, ೧೯೮೯-೯೦, ೧೯೯೦-೯೧ನೇ ಸಾಲಿನಲ್ಲಿ ಆಹಾರ ಕೋಶವು ಎಷ್ಟು ದಾಳಿಗಳನ್ನು ಮಾಡಿದೆ ?

(ಇ) ೧೯೮೯-೯೦, ೧೯೯೦-೯೧ರ ಸಾಲಿನಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ;

ಶ್ರೀ ಆಜೀಜ್ ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು

(ಆ) ೧೯೮೯-೯೦-೫೫೫-ದಾಳಿಗಳು
೧೯೯೦-೯೧
(ದಿನಾಂಕ ೧೧-೬-೯೦ ರವರೆಗೆ) ೬೯ ದಾಳಿಗಳು

(ಇ) ೧೯೮೯-೯೦

(ಅ) ದಾಖಲಾದ ಪ್ರಕರಣಗಳು ೩೪೯

(ಆ) ದಸ್ತಗಿರಿಯಾದ ಜನರು ೩೧೪

(ಇ) ಜಪ್ತಿ ಮಾಡಲಾದ ಪದಾರ್ಥಗಳ ಮೌಲ್ಯ ರೂ. ೩, ೨೩, ೯೩, ೫೬೧.೦೦

೧೯೯೦-೯೧ (೧೧-೬-೯೦ ರವರೆಗೆ)

(ಅ) ದಾಖಲಾದ ಪ್ರಕರಣಗಳು ೩೯

(ಆ) ದಸ್ತಗಿರಿಯಾದ ಜನರು ೩೮

(ಇ) ಜಪ್ತಿ ಮಾಡಲಾದ ಪದಾರ್ಥಗಳ ಮೌಲ್ಯ ರೂ. ೬೧, ೩೫, ೯೦೭.೫೫

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ವರ್ಷ ಏನು ಅಕ್ರಮವಾಗಿ ಆಹಾರ ಸಂಗ್ರಹಣೆ ಮಾಡಿರತಕ್ಕವರನ್ನು ದಸ್ತಗಿರಿಮಾಡಿ ಸುಮಾರು ಮೂರು ಕೋಟಿ ೨೩ ಲಕ್ಷಕ್ಕೂ ಹೆಚ್ಚು ಜಪ್ತಾದಂಥ ಮಾಲುಗಳು ಸಿಕ್ಕಿವೆ ಅಂತ ಹೇಳಿದ್ದಾರೆ ; ನಾನಾದರೂ ಕೇಳುವುದಕ್ಕೆ ಬಯಸುವುದು ಏನೆಂದರೆ, ಆಹಾರ ಇಲಾಖೆಯ ನಿಯಂತ್ರಣದಲ್ಲಿ ಆಹಾರ ಕೋಶ, (ಫುಡ್ ಸೆಲ್)